ಸಾಲಿನ ಟಿ.ಸಿ.ಹೆಚ್. ಹಾಗೂ ಬಿ.ಎಡ್. ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಕಾಲವಾಗುವಂತೆ ಒಂದು ಪಟ್ಟಿಯನ್ನು ಸರ್ಕಾರದಿಂದ ಪ್ರಕಟಣೆ ಮಾಡಿದರು ಆದರೆ ಇನ್ನು ಕೂಡ ಯಾವ್ಯಾವ ವಿದ್ಯಾರ್ಥಿಗಳು ಯಾವ್ಯಾವ ಶಾಲೆಗೆ ಹೋಗಬೇಕೆಂದು ಸರ್ಕಾರ ಇನ್ನು ಕೂಡ ತಿಳಿಸಿಲ್ಲ, ಆ ವಿದ್ಯಾರ್ಥಿಗಳು ನಾವು ಟಿ.ಸಿ.ಹೆಚ್.ಗೆ ಹೋಗಬೇಕೇ ಅಥವಾ ಡಿಗ್ರಿಗೆ ಹೋಗಬೇಕೇ ಎನ್ನುವ ಒಂದು ಅತಂತ್ರ ಸ್ಥಿತಿಯಲ್ಲಿದ್ದಾರೆ. ದಯಮಾಡಿ ಯಾವ ಕಾರಣಕ್ಕಾಗಿ ಅದನ್ನು ಇನ್ನು ನಿಧಾನ ಮಾಡುತ್ತಿದ್ದೀರಿ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯ ಮಂತ್ರಿಗಳು) : ಆ ಸ್ಥಿತಿಯೇ ಸರಿ ಇರಲಿಲ್ಲ, ಬಹಳ ಜನ ಪರ್ಮಿಷನ್ ಇಲ್ಲದೇ ಟಿ.ಸಿ.ಹೆಚ್.ಮತ್ತು ಕಾಲೇಜುಗಳನ್ನು ಮಾಡಿದ್ದರು, ಈಗ ಅನಧಿಕೃತವಾಗಿ ಈ ರೀತಿ ಪ್ರಾರಂಭವಾಗುವುದನ್ನು ನಿಲ್ಲಿಸಿದ್ದೇವೆ. ಅದರೂ ಮಾನ್ಯ ಸದಸ್ಯರು ಹೇಳಿದ ಹಾಗೆ ಯಾರನ್ನು ಯಾವ ಕಾಲೇಜುಗಳಿಗೆ ಪ್ರವೇಶವನ್ನು ಕೊಡಬೇಕು ಇದರ ಬಗ್ಗೆ....

ಶ್ರೀ ಹೆಚ್.ಸಿ. ಬಾಲಕೃಷ್ಣ : ಈಗ ಹೊಸ ಪಟ್ಟಿಯ ವಿಚಾರ ಮಾತನಾಡುತ್ತಿರುವುದು. ಈಗ ಹೊಸದು ಪ್ರಕಟವಾಗಿದೆ. ಅಧಿಕೃತ ಶಾಲೆಗಳಿಗೆ ನೀವು ಪ್ರಕಟ ಮಾಡಿದ್ದೀರಿ, ಆದರೂ ಕೂಡ ಯಾವ್ಯಾವ ವಿದ್ಯಾರ್ಥಿಗಳು ಯಾವ್ಯಾವ ಶಾಲೆಗೆ ಹೋಗಬೇಕು ಎಂದು ಮಾಡಿಲ್ಲ, ಬರೀ ಇಷ್ಟು ಶಾಲೆಗಳಿಗೆ, ಇಷ್ಟು ಸೀಟ್‌ಗಳಿವೆ, ಎಂದು ಪ್ರಕಟ ಮಾಡಿ, ಇನ್ನು ಇಂಥಂಥ ಶಾಲೆಗಳಿಗೆ ಇಂಥಂಥವರು ಹುಡುಗರು ಹೋಗಬೇಕೆಂದು ಪ್ರಕಟ ಮಾಡಿಲ್ಲ, ಆ ವಿದ್ಯಾರ್ಥಿಗಳು ಪ್ರವೇಶ ಪಡೆದು ಟಿ.ಸಿ.ಹೆಚ್.ಗೆ ಆಗಲಿ ಅಥವಾ ಬಿ.ಎಡ್ ಕಾಲೇಜುಗಳಿಗೇ ಆಗಲೀ ಸೇರಿ ಎರಡು ತಿಂಗಳುಗಳಾಗಬೇಕಾಗಿತ್ತು. ಇದುವರೆಗೂ ಯಾವ ಸ್ಪಷ್ಟೀಕರಣವನ್ನು ಕೊಟ್ಟಿಲ್ಲ, 1994-95ನೇ ಸಾಲಿನಲ್ಲಿ ಅನಧಿಕೃತ ಶಿಕ್ಷಣ ಸಂಸ್ಥೆಗಳಿಂದ ಮತ್ತು ಅಧಿಕೃತವಾಗಿ ಹೆಚ್ಚು ವಿದ್ಯಾರ್ಥಿಗಳಿಗೆ ನೀವು ಪರೀಕ್ಷೆಯನ್ನು ಒಂದು ಸಾರಿ ಕೊಡುತ್ತೇವೆಂದು ಹೇಳಿದ್ದೀರಿ, ಅದರ ಬಗ್ಗೆ ಏನು ಅನಾನುಕೂಲತೆಯಾಯಿತೋ ಅವರಿಗೆ ಪರೀಕ್ಷೆಯನ್ನು ಸಹ ನಿಲ್ಲಿಸಿದ್ದೀರಿ. ಈ ವಿದ್ಯಾರ್ಥಿಗಳಿಗೆ ಯಾವಾಗ ಪರೀಕ್ಷೆಗೆ ಕೊಡಿಸುತ್ತೀರಿ ಅದರ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕು.

ಶ್ರೀ ಜೆ.ಹೆಚ್. ಪಟೇಲ್ : ಸಂದರ್ಶನ ನಡೆದಿದೆ, ಹೊಸ ಪಟ್ಟಿಯನ್ನು ನಾವು ಪ್ರಕಟಣೆಯನ್ನು ಮಾಡುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಆ ಪಟ್ಟಿ ಪ್ರಕಟವಾಗಿದೆ, ಯಾರ್ಯಾರು ಯಾವ ಕಾಲೇಜಿಗೆ ಸೇರಬೇಕು ಅಂತ ನಿರ್ಧರಿಸಬೇಕು ಅಷ್ಟೇ. ಈಗಾಗಲೇ ಕಾಲೇಜು ಪ್ರಾರಂಭವಾಗಿ ಎರಡು ತಿಂಗಳುಗಳು ಆಗಬೇಕಾಗಿತ್ತು ಮತ್ತು ಈಗ ಮ್ಯಾನೇಜ್‌ಮೆಂಟ್‌ನವರು ಕೂಡ ಅವರ ಕೋಟವನ್ನು ಕೊಡುವುದಕ್ಕೆ ಕಾಯುತ್ತಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ : ಯಾರ್ಯಾರು ಯಾವ್ಯಾವ ಕಾಲೇಜಿಗೆ ಸೇರಬೇಕು ಎನ್ನುವುದನ್ನು ಸರಿಪಡಿಸುತ್ತೇವೆ.

(ಇ) ಕೋಲಾರ ಜಿಲ್ಲೆಯಲ್ಲಿ ಕರುಳು ಬೇನೆಯಿಂದ 5 ಜನರ ಸಾವು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಮ್ಮ ಕೋಲಾರ ಜಿಲ್ಲೆಯಲ್ಲಿ ಅದರಲ್ಲೂ ಕೋಲಾರ ತಾಲ್ಲೂಕಿನಲ್ಲಿ 4 ದಿವಸಗಳ ಹಿಂದೆ ಕರುಳು ಬೇನೆಯಿಂದ 5 ಜನರು ಮೃತಪಟ್ಟಿದ್ದಾರೆ. ಅದರಲ್ಲಿ ಒಬ್ಬರು ಸ್ಥಳದಲ್ಲಿಯೇ ಸತ್ತಿದ್ದಾರೆ, ಇನ್ನು ಉಳಿದ 4 ಜನರು ಆಸ್ಪತ್ರೆಯಲ್ಲಿ ಸತ್ತಿದ್ದಾರೆ. ಆಸ್ಪತ್ರೆಯಲ್ಲಿ ಸತ್ತಿರುವುದಕ್ಕೆ ಅಲ್ಲಿ ಸರಿಯಾದಂತಹ ವ್ಯವಸ್ಥೆ ಇಲ್ಲದೇ, ಔಷಧಿಗಳು ಇಲ್ಲದೇ ಸತ್ತಿರತಕ್ಕಂಥದ್ದು ಎನ್ನುವ ಒಂದು ದಟ್ಟವಾದ ಗುಮಾನಿ ಇದೆ. ಈ ಕರುಳುಬೇನೆ ಪ್ರತಿ ವರ್ಷ ಈ ಕೋಲಾರ ಜಿಲ್ಲೆಯ ಯಾವುದಾದರೂ ಒಂದು ತಾಲ್ಲೂಕಿನಲ್ಲಿ ಕಡ್ಡಾಯವಾಗಿ ಕಾಣಿಸಿಕೊಳ್ಳತಕ್ಕ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಇದಕ್ಕೆ ಸರ್ಕಾರದ ಮುಖ್ಯ

ಆರೋಗ್ಯ ಇಲಾಖೆ ಏನಿದೆ, ಅದಕ್ಕೆ ಸರಿಯಾದಂತಹ ಔಷಧಿಗಳ ವ್ಯವಸ್ಥೆಯಿಲ್ಲ. ಆಸ್ಪತ್ರೆಯಲ್ಲಿರತಕ್ಕಂತಹ ಡಾಕ್ಟರ್‌ಗಳ, ನರ್ಸ್‌ಗಳ ವ್ಯವಸ್ಥೆ ಸರಿಯಿಲ್ಲದೇ ಈ ರೀತಿಯ ಬೇಜಾವಾಬ್ದಾರಿಯಿಂದ ಕೋಲಾರ ಜಿಲ್ಲೆಯಲ್ಲಿ ಪ್ರತಿ ವರ್ಷ ಕರುಳುಬೇನೆಯಿಂದ ಸಾಯತಕ್ಕಂತಹ ಪರಿಸ್ಥಿತಿ ಬಂದಿದೆ. ಇದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಹೇಳತಕ್ಕದ್ದು ಮತ್ತು ಇವತ್ತು ಕೋಲಾರ ಜಿಲ್ಲೆಯಲ್ಲಿ ಈ ಕರುಳುಬೇನೆ ಪರಿಸ್ಥಿತಿ ಹೇಗಿದೆ ಎಂಬುದನ್ನು ಸರ್ಕಾರ ಇದಕ್ಕೆ ಸಂಬಂಧಪಟ್ಟವರು ಸ್ಪಷ್ಟವಾಗಿ ಉತ್ತರವನ್ನು ಕೊಡಬೇಕೆಂಬುದು ಒಂದು ಪ್ರಶ್ನೆ. ಮಾನ್ಯ ಅಧ್ಯಕ್ಷರೇ, ಇನ್ನೊಂದು ನಮ್ಮ ಜಿಲ್ಲೆಗೆ ಸಂಬಂಧಪಟ್ಟಂಥದ್ದು, ಇವತ್ತು ಡೆನ್‌ಮಾರ್ಕ್‌ನ ಪ್ರಧಾನ ಮಂತ್ರಿಗಳು ನಮ್ಮ ಜಿಲ್ಲೆಗೆ ಹೋಗುತ್ತಿದ್ದಾರೆ. ಇಷ್ಟು ಹೊತ್ತಿಗೆ ಅವರು ಈಗಾಗಲೇ ಅಲ್ಲಿ ಇರುತ್ತಾರೆ. ಅದರಲ್ಲಿಯೂ ನಾನು ಪ್ರತಿನಿಧಿಸತಕ್ಕಂಥ ಬಾಗೇಪಲ್ಲಿ ತಾಲ್ಲೂಕು, ಆದರೆ ಪ್ರತೇಕವಾದ ಜಾಗ ನನ್ನ ಕ್ಷೇತ್ರವಲ್ಲ, ಆದರೆ ನನಗೆ ಇದರ ಬಗ್ಗೆ ಯಾವುದೇ ರೀತಿಯಾದಂತಹ ಸುದ್ದಿ ಇಲ್ಲ, ಮತ್ತೆ ನಮ್ಮ ಕೋಲಾರ ಜಿಲ್ಲೆಗೆ ಬೇರೆ ದೇಶದ ಹಿರಿಯ ಪ್ರಧಾನ ಮಂತ್ರಿಗಳು ಬರುತ್ತಿದ್ದಾರೆ, ನನ್ನ ಅಭಿಪ್ರಾಯದ ಪ್ರಕಾರ ಆ ಆಹ್ವಾನ ಪತ್ರಿಕೆಯಲ್ಲಿ ಎಲ್ಲಾ ಕೋಲಾರ ಜಿಲ್ಲೆಯ ಶಾಸಕರ ಹೆಸರು ಇರಬೇಕಾಗಿತ್ತು. ಮತ್ತು ಆ ಸಮಾರಂಭಕ್ಕೆ ಎಲ್ಲಾ ಶಾಸಕರುಗಳನ್ನು ಕರೆಯಬೇಕಾಗಿತ್ತು. ನಮಗೆ ಯಾವುದೇ ರೀತಿಯಾದಂತಹ ಆಹ್ವಾನ ಪತ್ರಿಕೆ ಇಲ್ಲ. ನಾನು ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಲ್ಲಿ ಪ್ರಸ್ತಾಪ ಮಾಡಿ ಹೇಳಿದ ಮೇಲೆ ನನಗೆ ಒಂದು ಆಹ್ವಾನ ಪತ್ರಿಕೆಯನ್ನು ಕೊಟ್ಟು ನೀವು ಬನ್ನಿ ಎಂದು ಹೇಳುತ್ತಾರೆ.

ಇದು ನಿಜವಾಗಿಯೂ ನೋವಿನ ಸಂಗತಿ, ಒಬ್ಬ ವಿದೇಶಿ ಪ್ರಧಾನ ಮಂತ್ರಿ ನಮ್ಮ ಜಿಲ್ಲೆಗೆ ಅದರಲ್ಲಿಯೂ ನೀರಾವರಿ ಸಮಸ್ಯೆಗೋಸ್ಕರವಾಗಿ ಡೆನ್‌ಮಾರ್ಕ್ ಸರ್ಕಾರ ನೇರವು ಕೊಟ್ಟು ಸುಮಾರು ಇಡೀ ಜಿಲ್ಲೆಯನ್ನು ಕುಡಿಯುವ ನೀರಿಗೆ ಒಳಪಡಿಸುವಂತಹ ಒಂದು ಸಂದರ್ಭಕ್ಕೆ ಒಂದು ಅಶ್ವಾಸನೆಯನ್ನು ಕೊಡತಕ್ಕಂತಹ ಮತ್ತು ಈಗಾಗಲೇ ಅವರು ತೆಗೆದುಕೊಂಡಿರತಕ್ಕಂತಹ ನೀರಾವರಿ ಯೋಜನೆಗಳನ್ನು ಅವರು ಪರಿಶೀಲನೆ ಮಾಡಲಿಕ್ಕೋಸ್ಕರವಾಗಿ ಬರುತ್ತಿರತಕ್ಕಂತಹ ಸಂದರ್ಭದಲ್ಲಿ ನಮ್ಮ ಜಿಲ್ಲೆಯಲ್ಲಿರತಕ್ಕಂತಹ ಶಾಸಕರನ್ನು ಆ ಸಮಾರಂಭಕ್ಕೆ ಆಮಂತ್ರಿಸಿ.....

ಅಧ್ಯಕ್ಷರು : ಮೆನ್‌ಷನ್ ಮಾಡಿದ್ದೀರಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲ, ಉದ್ಘಾಟನೆ ಮಾಡತಕ್ಕಂತಹ ಕಾರ್ಯಕ್ರಮ ಇದೆ. ಮತ್ತೆ ಪರಿಶೀಲನೆ ಮಾಡತಕ್ಕಂತಹ ಒಂದು ಕಾರ್ಯಕ್ರಮವಿದೆ, ಆದ್ದರಿಂದ ಇಡೀ ಜಿಲ್ಲೆಯ ಶಾಸಕರನ್ನು ಕತ್ತಲಲ್ಲಿ ಇಟ್ಟು ಆ ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ. ನಾನು ಪ್ರತೇಕವಾಗಿ ಅದೇ ತಾಲ್ಲೂಕಿನಲ್ಲಿ ಇರತಕ್ಕಂತಹವನ್ನು ಆದ್ದರಿಂದ ಸರ್ಕಾರ ಇದಕ್ಕೆ ಸ್ಪಷ್ಟವಾದ ಸ್ಪಷ್ಟೀಕರಣವನ್ನು ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ (ಹಣಕಾಸು ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎರಡು ವಿಚಾರಗಳನ್ನು ಎತ್ತಿದ್ದಾರೆ. ಒಂದು ಅವರ ಕೋಲಾರ ಜಿಲ್ಲೆಯ. ಕೋಲಾರ ತಾಲ್ಲೂಕಿನಲ್ಲಿ ಕರುಳುಬೇನೆ ರೋಗ ಬಂದಿದೆ, ಇದರಿಂದ ಬಹಳಷ್ಟು ಜನರಿಗೆ ತೊಂದರೆಯಾಗಿದೆ, ಇದರ ಬಗ್ಗೆ ಆರೋಗ್ಯ ಇಲಾಖೆಯವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ, ಎನ್ನತಕ್ಕದ್ದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಔಷಧಿಗಳನ್ನು ಮತ್ತು ಸಿಬ್ಬಂದಿಯನ್ನು ಕಳುಹಿಸಿ ಕೊಡಬೇಕು. ಆ ರೋಗವನ್ನು ನಿಯಂತ್ರಣ ಮಾಡುವುದಕ್ಕೆ ಮತ್ತು ಪದೇ ಪದೇ ಅಲ್ಲಿ ಈ ರೋಗ ಬರುತ್ತಿದೆ ಎನ್ನತಕ್ಕಂಥದ್ದನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದರ ಬಗ್ಗೆ ಮಾಹಿತಿ ತರಿಸಿ, ಏನೇನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದರ ಬಗ್ಗೆ ಉತ್ತರವನ್ನು ಕೊಡಲಾಗುತ್ತದೆ. ಮತ್ತು ಅದರ

ಜೊತೆಗೆ ಇದನ್ನು ನಿಯಂತ್ರಣ ಮಾಡಬೇಕೆಂದು, ಮತ್ತು ಅದಕ್ಕೆ ಎಷ್ಟು ಔಷಧಿಗಳನ್ನು ಕೊಡಬೇಕು, ಡಾಕ್ಟರ್‌ಗಳು ಯಾರು ಯಾರು ಹೋಗಬೇಕು ಎನ್ನುವುದರ ಬಗ್ಗೆ ಕೂಡಲೇ ಸರ್ಕಾರ ಆರೋಗ್ಯ ಇಲಾಖೆಯವರಿಗೆ ಸೂಚನೆಯನ್ನು ಕೊಡುತ್ತದೆ ಎನ್ನುವ ಮಾತನ್ನು ಕೂಡ ತಿಳಿಸುತ್ತೇನೆ. ಡೆನ್‌ಮಾರ್ಕ್‌ನ ಪ್ರಧಾನ ಮಂತ್ರಿಗಳು ಕೋಲಾರ ಜಿಲ್ಲೆಗೆ ಹೋಗಿರುವುದರ ಬಗ್ಗೆ ಇವರಿಗೂ ಕೂಡ ಆಹ್ವಾನ ಪತ್ರಿಕೆಯನ್ನು ಕಳುಹಿಸಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರು ಅಲ್ಲಿಗೆ ಹೋಗಿ ಆ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಹೇಳಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಈಗಲೇ ಹೋಗಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ದಯವಿಟ್ಟು ಕೇಳಬೇಕು, ನನ್ನ ಪ್ರಶ್ನೆ ಇಷ್ಟೆ, ನಾನು ಕೇಳಿದ ಪ್ರಶ್ನೆ ಏನೆಂದರೆ ಡೆನ್‌ಮಾರ್ಕ್ ಪ್ರಧಾನ ಮಂತ್ರಿಗಳು ನಮ್ಮ ಜಿಲ್ಲೆಗೆ ಬರುತ್ತಾ ಇರತಕ್ಕಂತಹ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಎಲ್ಲಾ ಶಾಸಕರ ಹೆಸರು ಆ ಆಮಂತ್ರಣ ಪತ್ರಿಕೆಯಲ್ಲಿ ಇರಬೇಕಾಗಿತ್ತು, ಅದು ಇಲ್ಲ, ಇದು ಒಂದನೇ ಪ್ರಶ್ನೆ. ಎರಡನೆಯದಾಗಿ ಅವರು ಬರುತ್ತಾ ಇರತಕ್ಕಂಥಹದ್ದು ನೀರಿನ ಸಮಸ್ಯೆಯನ್ನು ಪರಿಹರಿಸುವುಂತಹ ಪ್ರಶ್ನೆ ಇರುವಾಗ ನಮ್ಮ ಜಿಲ್ಲೆಯ ಎಲ್ಲಾ ಶಾಸಕರ ಜೊತೆಯಲ್ಲಿ ಮಾತನಾಡುವುದು ಇರಲಿ ಕೊನೆಯ ಪಕ್ಷ ಅವರು ಏನು ಹೇಳುತ್ತಾರೆ ಎನ್ನುವುದನ್ನು ಕೇಳುವ ಅವಕಾಶವನ್ನಾದರೂ ಕೂಡಬೇಕಾಗಿತ್ತು ಮತ್ತೆ ಪ್ರತೇಕವಾಗಿ ಹೇಳುವುದೆನೆಂದರೆ ನಾನು ಪ್ರತಿನಿಧಿಸತಕ್ಕಂತಹ ತಾಲ್ಲೂಕಿಗೆ ಬರುತ್ತಿದ್ದಾರೆ, ಆದ್ದರಿಂದ ಕನಿಷ್ಟ ಪಕ್ಷ ನನಗಾದರೂ ಒಂದು ಅವಕಾಶವನ್ನು ಕೊಡಬೇಕಾಗಿತ್ತು,ಆದರೆ ಆಹ್ವಾನ ಪತ್ರಿಕೆಯನ್ನು ಈಗ ಕೊಟ್ಟಿದ್ದಾರೆ...

ಅಧ್ಯಕ್ಷರು : ಭಾಗಶಃ ನಿಮ್ಮ ಆಕ್ಷೇಪಣೆಯನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ, ಲೋಪವಾಗಿದೆ ಎಂದು ಹೇಳುತ್ತಿದ್ದಾರೆ.

ಕೆ.ಎಸ್. ಈಶ್ವರಪ್ಪ : ನನ್ನ ಕ್ಷೇತ್ರದಲ್ಲೂ ಇದೇ ರೀತಿಯಾಗಿತ್ತು.

(ಗೊಂದಲ)

ಅಧ್ಯಕ್ಷರು : ಕೇಳುತ್ತೇನೆ. ಕುಂಬಳೆ ಸುಂದರರಾವ್ ಅನುಭವವನ್ನು ಕೇಳುವುದಿಲ್ಲ ಎನ್ನುತ್ತೇವೆಯೋ ನಿಮ್ಮದು ಬಹಳ ರಸಮಯವಾದ ಅನುಭವಗಳಿವೆ ಎಂದು ವರ್ತಮಾನ ಬಂದಿದೆ. ಅಮೇಲೆ ಕುಳಿತು ಚರ್ಚೆ ಮಾಡೋಣ.

ಶ್ರೀ ಕುಂಬಳೆ ಸುಂದರರಾವ್ : ಒಂದೇ ಒಂದು ವಾಕ್ಯ. ಮೊನ್ನೆ ಕೈಗಾರಿಕ ಮಂತ್ರಿಗಳು ಸೂರತ್ಕಲ್ ಕ್ಷೇತ್ರಕ್ಕೆ ಬಂದಿದ್ದರು. ಸೂರತ್ಕಲ್ ಕ್ಷೇತ್ರ ಕೈಗಾರಿಕ ಕ್ಷೇತ್ರವಾಗಿ ಅಲ್ಲಿ ಸಮಸ್ಯೆ ಇದ್ದುದಕ್ಕೆ ಪ್ರತಿನಿಧಿಸಬೇಕಾಗಿದ್ದ ನನಗೆ ಒಂದು ಆಮಂತ್ರಣ ಇಲ್ಲ, ಒಂದು ಸುದ್ದಿ ಇಲ್ಲ, ಇದು ಏಕೆ ಹೇಗೆ ಆಗುತ್ತಿದೆ? ಅವರ ಪಕ್ಷಕ್ಕೆ ಸಂಬಂಧಪಟ್ಟಂತಹ ಸದಸ್ಯರಿಗೆ ಕೊಟ್ಟಿದ್ದಾರೆ.

ಅಧ್ಯಕ್ಷರು :ಅವರಿಗೆ ನಿಮ್ಮ ಪರಿಚಯ ಚೆನ್ನಾಗಿ ಇಗಿಲ್ಲ, ಅವರಿಗೆ ನಿಮ್ಮ ವಿಷಯ ಗೊತ್ತಿದ್ದರೆ ಮೊದಲು ನಿಮ್ಮ ಹತ್ತಿರವೇ ಬರುತ್ತಿದ್ದರು. ಅವರಿಗೆ ನಷ್ಟ ನಿಮ್ಮ ಪತ್ತಿರ ಬರದಿದ್ದರಿಂದ.

ಶ್ರೀ ಕುಂಬಳೆ ಸುಂದರರಾವ್ : ಇಲ್ಲ, ನನ್ನಗೊಂದು ಆಮಂತ್ರಣ ಇರಬೇಕಾಲ್ಲ, ಕೈಗಾರಿಕಾ ಮಂತ್ರಿಗಳು ನನ್ನ ಕ್ಷೇತ್ರಕ್ಕೆ ಬರುತ್ತಾರೆ, ಆ ಕೈಗಾರಿಕೆ ನನ್ನ ಕ್ಷೇತ್ರದಲ್ಲಿದೆ, ಅಲ್ಲಿ ಅನೇಕ ಸಮಸ್ಯೆಗಳಿವೆ, ಅಲ್ಲಿ ನಿತ್ಯ ದುಃಖವಿದೆ ನಮಗೆ, ಅಂಥದ್ದರಲ್ಲಿ ಒಂದು ಆಮಂತ್ರಣ ಕೊಟ್ಟಿಲ್ಲ ಬೇರೆ ಸದಸ್ಯರಿಗೆಲ್ಲ ಹೇಳಿದ್ದಾರೆ ನನಗೆ ಮಾತ್ರ ಇಲ್ಲ, ನಾನು ಆ ಸ್ಥಳದ ಸದಸ್ಯ.

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಕೈಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೇ, ಆ ಕಾರ್ಯಕ್ರಮ ಬಗ್ಗೆ ಎಲ್ಲರಿಗೂ ಆಮಂತ್ರಣವನ್ನು ಕಳುಹಿಸಿದ್ದೇನೆ. ಅಂಚೆಯಲ್ಲಿ ಮುಟ್ಟದೇ ಇದ್ದಕ್ಕಾಗಿ ದಯವಿಟ್ಟು ಕ್ಷಮಿಸಬೇಕು.ನಾನೇನು ಉದ್ದೇಶ ಪೂರ್ವಕವಾಗಿ ಮಾಡಿಲ್ಲ. ಎಲ್ಲರಿಗೂ ಕಳುಹಿಸಿ ನಿಮಗೆ ಏಕೆ ಕಳುಹಿಸುವುದಿಲ್ಲ.

ಅಧ್ಯಕ್ಷರು : ಅದು ಹಾಗಲ್ಲ. ನೀವು ಬೇರೆ ಯಾವ ಸದಸ್ಯರನ್ನಾದರೂ ಅಲಕ್ಷ್ಯ ಮಾಡಿ ಶ್ರೀ ಕುಂಬಳೆ ಸುಂದರರಾಯರು ಬಹಳ ವಿಶಿಷ್ಟವಾದಂತಹ ವ್ಯಕ್ತಿತ್ವವುಳ್ಳವರು ಅವರ ವಿಚಾರದಲ್ಲಿ ಹಾಗೇ ಮಾಡಬೇಡಿ. ನಿಮಗೇ ನಷ್ಟವಾಗುತ್ತದೆ. ಅವರ ಹತ್ತಿರ ತಿಳಿದುಕೊಳ್ಳುವುದು ಬಹಳ ಇದೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಆ ರೀತಿ ಮಾಡಲಿಕ್ಕಿಲ್ಲ. ಅವರ ಬಗ್ಗೆ ನಾನು ಹಾಗೆ ಮಾಡಲಿಕ್ಕೆ ಸಾಧ್ಯವಿಲ್ಲ. ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ. ದಯಮಾಡಿ ತಪ್ಪು ತಿಳಿದುಕೊಳ್ಳಬಾರದು. ನಾನು ಯಾವಾಗಲೂ ಯಾವುದೇ ಕಾರ್ಯಕ್ರಮಕ್ಕೆ ಹೋಗಲಿ ತಿಳಿಸೇ ಹೋಗುತ್ತೇನೆ. ಅಂಚೆಯ ಪ್ರಾಬ್ಲಮ್ ಆಗಿರಬಹುದು. ಎಲ್ಲರಿಗೂ ಕಳುಹಿಸಿ ನಿಮಗೆ ಕಳುಹಿಸಿಲ್ಲ ಅಂದರೆ ಏನು?

(ಈ) ಮಂಡ್ಯ ಜಿಲ್ಲೆಯಲ್ಲಿ ಬೆಳೆದಿರುವ ಕಬ್ಬನ್ನು ಕಾರ್ಖಾನೆಗಳವರು ತೆಗೆದುಕೊಳ್ಳದೇ ಇರುವ ಬಗ್ಗೆ

+ ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ನಮಗೆ ಗೊತ್ತಿರುವ ಹಾಗೆ ಮಂಡ್ಯ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಪ್ರದೇಶದಲ್ಲಿ ನಾವು ಕಬ್ಬನ್ನು ಬೆಳೆಯುತ್ತಿದ್ದೇವೆ. ಈ ವರ್ಷ ಬಹಳ ಹೆಚ್ಚಿನ ಪ್ರದೇಶದಲ್ಲಿ ರೈತರು ಕಬ್ಬನ್ನು ಬೆಳೆದಿದ್ದಾರೆ. ಮೈಸೂರು ಜಿಲ್ಲೆಯಲ್ಲಿಯೂ ಸಹ ನಮ್ಮ ಅಕ್ಕ ಪಕ್ಕದ ಪ್ರದೇಶದಲ್ಲಿ ಹೆಚ್ಚಿನ ಕಬ್ಬನ್ನು ಬೆಳೆದು ಈ ವರ್ಷ ಈಗ ಇರತಕ್ಕಂತಹ ಕಾರ್ಖಾನೆಗಳು ಬೆಳೆದಿರುವ ಕಬ್ಬನ್ನು ತೆಗೆದುಕೊಳ್ಳುವುದು ಕಷ್ಟವಾಗಿದೆ. ಏನು ಒಪ್ಪಿಗೆ ಕಬ್ಬು ಇದೆ, ಆ ಕಬ್ಬನ್ನು ಕೂಡ ಇದುವರೆಗೆ ಅರೆಯದೇ ಇರತಕ್ಕದ್ದನ್ನು ಮಾನ್ಯ ಸಕ್ಕರೆ ಮಂತ್ರಿಗಳು ಗಮನದಲ್ಲಿಟ್ಟುಕೊಳ್ಳಬೇಕು. ಮತ್ತು ನಾನ್ ಒಪ್ಪಿಗೆ ಕಬ್ಬು ಏನಿದೆ ಇದೆಲ್ಲ ಸೇರಿ ನಮ್ಮ ಮಂಡ್ಯ ಜಿಲ್ಲೆಯಲ್ಲಿ ಸುಮಾರು 35 ರಿಂದ 40 ಲಕ್ಷ ಟನ್ ಕಬ್ಬು ಹಾಗಿಯೇ ನಿಂತಿದೆ. ಸಾಮಾನ್ಯವಾಗಿ 11 ಅಥವಾ 12 ತಿಂಗಳಿನಲ್ಲಿ ಕಬ್ಬನ್ನು ಅರೆಯಬೇಕಾಗಿತ್ತು, ಆದರೆ 15 ತಿಂಗಳುಗಳ ವರೆಗೂ ಕಬ್ಬು ನಿಂತಿದೆ.

ಬಹಳ ತೊಂದರೆ ಇದೆ. ಈಗಿರತಕ್ಕ ಕಾರ್ಖಾನೆಗಳಲ್ಲಿ ಅರೆಯುವ ಅವಕಾಶ ಇಲ್ಲ. ಅದ್ದರಿಂದ ಸರ್ಕಾರ ತಕ್ಷಣ ಅಕ್ಕಪಕ್ಕದ ಕಾರ್ಖಾನೆಗಳು ಎಲ್ಲಿವೆ, ಅವು ನಮ್ಮ ರಾಜ್ಯದಲ್ಲಿರಬಹುದು ಅಥವಾ ಬೇರೆ ರಾಜ್ಯದಲ್ಲಿರಬಹುದು ಅವುಗಳ ಜೊತೆ ತಾವು ಮಾತನಾಡಿ ತಕ್ಷಣ ನಮ್ಮಲ್ಲಿ ಬೆಳೆದು ನಿಂತಿರತಕ್ಕ ಕಬ್ಬನ್ನು ಆ ಒಂದು ಕಾರ್ಖಾನೆಗಳಿಗೆ ಕಳುಹಿಸಿ ಅದನ್ನು ಅರೆಸತಕ್ಕ ವ್ಯವಸ್ಥೆ ಮಾಡಬೇಕು. ಈ ವ್ಯವಸ್ಥೆ ಈ ವರ್ಷ ಒಂದೇ ಅಲ್ಲ, ಅನೇಕ ವರ್ಷಗಳಿಂದ ನಡೆದು ಕೊಂಡು ಬಂದಿದೆ. ನಾವು ಸಹ ಹಿಂದೆ ಮಂತ್ರಿಗಳಾಗಿದ್ದಾಗ ನಮ್ಮ ಪಾಂಡವಪುರ ಭಾಗದಲ್ಲಿ ಕಬ್ಬು ಹೆಚ್ಚು ಬೆಳೆದಿದ್ದಾಗ ಬಣ್ಣಾರಿಯಮ್ಮ ಸಕ್ಕರೆ ಕಾರ್ಖಾನೆಗೆ ನಾವು ಇಲ್ಲಿಂದ ಕಬ್ಬನ್ನು ಕಳುಹಿಸಿದ್ದೆವು. ಅವರ ಜೊತೆ ಮಾತನಾಡಿ ಇಲ್ಲಿ ಹೆಚ್ಚಿಗೆ ಬೆಳೆಯತಕ್ಕ ಕಬ್ಬನ್ನು ಅಲ್ಲಿಗೆ ಕಳುಹಿಸಿದ್ದೆವು. ಇದು ಹೊಸ ಪದ್ಧತಿ ಏನಲ್ಲ. ಆದ್ದರಿಂದ ತಾವು ಇದನ್ನು ಬಹಳ ಲಘುವಾಗಿ ತೆಗೆದುಕೊಳ್ಳಬಾರದು. ನಮ್ಮ ಮಂಡ್ಯ ಜಿಲ್ಲೆ ಮತ್ತು ಅಕ್ಕಪಕ್ಕದ ಬನ್ನೂರು ಕ್ಷೇತ್ರದ ನಮ್ಮ ಕೃಷ್ಣಪ್ಪನವರ ಕ್ಷೇತ್ರದಲ್ಲಿ ಬಹಳ ಬೆಳೆದಿದ್ದಾರೆ. ಅತಿ ಶೀಘ್ರವಾಗಿ ಸಂಬಂಧಪಟ್ಟ ಕಾರ್ಖಾನೆಗಳ ಮ್ಯಾನೇಜ್‌ಮೆಂಟ್‌ನವರ ಜೊತೆ ಮಾತನಾಡಿ ಈ ನಾನ್ ಒಪ್ಪಿಗೆ ಕಬ್ಬು ಏನಿದೆ ಅದನ್ನು ಆದಷ್ಟು ಜಾಗ್ರತೆ ಅರೆಸಿಕೊಟ್ಟು